ಮುಜರೈ.

ಇಸ್ತಿಹಾರ್ನಾಮೆ.

ತಾರೀಖು 8ನೆ ಡಿಸೆಂಬರ್ 1904.

ನಂ. 2108 – ಮು. ಫೈ. 4-1900, ಮೈ|| ರಾ' ರಾ|| ಹಲಗನಹಳ್ಳಿ ನರಸೆಗೌಡರು, ಬಹಳ ವೃದ್ಧಾಪ್ಯವಾಗಿರು ತ್ತಾರೆಂದು ರಿಪೋರ್ಟು ಮಾಡಲ್ಪಟ್ಟ ತಮ್ಮ ತಂದೆಯಾದ ಕೊಲ್ಲೇರಿ ರೆಡ್ಡಿಯವರಿಗೆ ಬದಲಾಗಿ, ಗೋರಿಬಿದನೂರು ತಾಲ್ಲೂಕಿನಲ್ಲಿ ರುವ ಮುಜರೈಗೆ ಸಂಬಂಧಪಟ್ಟ ವಿದುರಾಶ್ವತ್ಥದ ಕೆಲಸಗಳನ್ನು ವೇಲ್ವಿಚಾರಣೆ ಮಾಡುವಬಗ್ಗೆ ಧರ್ಮದರ್ಶಿಗಳ ಪೈಕಿ ಬ್ಬರನ್ನಾಗಿ ನೊಕರನ್ನಾಮಿಸಲ್ಪಟ್ಟಿರುತ್ತಾರೆ.

ಹುಕುಂ ಬಮೋಜೇಬ್,
ಎಲ್. ಅನಂತಸ್ವಾಮಿರಾವ್,
ಮುಜರೈ ಇಲಾಖೆಯ ಸೆಕ್ರಟೆರಿ.

ಜಿಯೋಲಾಜಿಕಲ್.

ಇಸ್ತಿಹಾರ್ನಾಮೆ.

ತಾರೀಖು 12ನೆ ಡಿಸೆಂಬರ್ 1904.

ನಂ. 540 ಎಸ್., ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಮೈಸೂರು ಜಿಯೋಲಜಿಕಲ್ ಮ್ಯೂಜಿಯಮಿನ ಕ್ಯೂರೇಟರ್ ಮತ್ತು ಸೆಂಟ್ರಲ್ ಕಾಲೇಜಿನ ಭೂರಚನಾ ಶಾಸ್ತ್ರದ ಉಪನ್ಯಾಸಕರಾದ ಮೈ|| ವಿ. ಎಸ್. ಸಾಂ ಬಶಿವ ಅಯ್ಯರ್, ಬಿ. ಎಸ್ಸಿ., ಎ ಎಲ್. ಸಿ. ಇ., ಯವರಿಗೆ 1904ನೆ ನವಂಬರ್ 21ನೆ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ಹುಕುಂ ಬಮೋಜೇಬ್,
ಇ. ಡಬ್ಲ್ಯೂ. ವೆದರಾಲ್,
ಫಾರ್ ಜಿಯೋಲಾಜಿಕಲ್ ಇಲಾಖೆಯ ಗವರ್ನಮೆಂಟ್ ಸೆಕ್ರಟೆರಿ.

ಮಿಲಿಟೆರಿ.

ಇಸ್ತಿಹಾರ್ನಾಮೆ.

ತಾರೀಖು 10ನೆ ಡಿಸೆಂಬರ್ 1904.

ನಂ. 1873 – 5, ಮೈಸೂರು ಸಂಸ್ಥಾನದ ಫೌಜುಗಳ ಚೀಫ್ ಕಮ್ಯಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ. ದೇಶ ರಾಜೆ ಅರಸಿನವರಿಗೆ 1904ನೆ ನವಂಬರ್ 29ನೆ ಮಕ್ಕಂ 1720—23, ಮಿಲಿಟೆರಿ, ನೆ ನಂಬರ್ ಇಸ್ತಿಹಾರ್ ನಾಮೆಯಲ್ಲಿ ಕೊಟ್ಟಿದ್ದ 5 ದಿನಗಳ ಕ್ಯಾಜುಯಲ್ ರಜಾವನ್ನು ಅವರು ಉಪಯೋಗಿಸಿಕೊಂಡು 1904ನೆ ಡಿಸೆಂಬರ್ 3ನೆ ತಾರೀಖಿನ ಪೂರ್ವಾಹ್ನದಲ್ಲಿ ಮೈಸೂರು ಸಂಸ್ಥಾನದ ಫೌಜುಗಳ ಚೀಫ್ ಕಮ್ಯಾಂಡೆಂಟರವರ ಆಫೀಸಿನ ಚಾರ್ಜನ್ನು ಪುನಃ ವಹಿಸಿ ರುತ್ತಾರೆ.

ಮೈಸೂರು ಸಂಸ್ಥಾನದ ಫೌಜುಗಳ ಚೀಫ್ ಕಮ್ಯಾಂಡೆಂಟರವರ ಪರಸನಲ್ ಅಸಿಸ್ಟೆಂಟರಾದ ಮೈ|| ಆರ್. ಪುಟ್ಟಣ್ಣ, ಬಿ. ಎ., ಬಿ. ಎಲ್., ಯವರು, ಲೆಫ್ಟಿನೆಂಟ್ ಕರ್ನಲ್ ಜೆ. ದೇಶರಾಜೆ ಅರಸಿನವರು ರಜಾವಲ್ಲಿದ್ದ ಕಾಲದಲ್ಲಿ, ಚೀಫ್ ಕಮ್ಯಾಂ ಡೆಂಟರವರ ಆಫೀಸಿನ ಚಾರ್ಜ್‌ನಲ್ಲಿದ್ದರು.

ಹುಕುಂ ಬಮೋಜೇಬ್,
ಆರ್. ಜಿ. ಜೋನ್ಸ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟೆರಿ ಅಸಿಸ್ಟೆಂಟ್.